205 (624) : ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನಲ್ಲಿ ಬಸ್ ಡಿಪೋ ನಿರ್ಮಾಣಕ್ಕೆ ಅಂದಾಜು ಪಟ್ಟಿ ಸಿದ್ಧಪಡಿಸಿ ರೂ. 60.00 ಲಕ್ಷಗಳನ್ನು ಮಂಜೂರಾತಿ ಪಡೆದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇನ್ನೂ ಕಾಮಗಾರಿ ಪ್ರಾರಂಭಗೊಳಿಸದಿರಲು ಕಾರಣಗಳೇನು;

ಇ) ಹಾಗಿದ್ದಲ್ಲಿ, ಯಾವಾಗ ಬಸ್ ಡಿಪೋವನ್ನು ಪ್ರಾರಂಭಿಸಲಾಗುವುದು;

ಈ) ದೇವದುರ್ಗ ತಾಲ್ಲೂಕಿನ ಬಸ್ ಸಂಚಾರವಿರುವ ಗ್ರಾಮಗಳೆಷ್ಟು; ಬಸ್ ಸಂಚಾರ ಇರದ ಗ್ರಾಮಗಳೆಷ್ಟು; ಯಾವ ಕಾರಣಕ್ಕಾಗಿ ಬಸ್ ಸಂಚಾರ ಇರುವುದಿಲ್ಲ ತಿಳಿಸಿರಿ;

ಉ) ರಾಯಚೂರು ಜಿಲ್ಲೆಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗದಲ್ಲಿ ನಿರ್ವಾಹಕರು ವಾಹನ ಚಾಲಕರು ಮತ್ತು ಸಿಬ್ಬಂದಿ ವರ್ಗದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ; ಯಾಗಿದ್ದಲ್ಲಿ ಸರ್ಕಾರ ತಗೆದುಕೊಂಡ ಕ್ರಮಗಳೇನು;

ಊ) ರಾಯಚೂರು ವಿಭಾಗದಲ್ಲಿ ಸಂಚಾರಕ್ಕೆ ಯೋಗ್ಯವಲ್ಲದ ಬಸ್ಸುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಹೊಸ ಬಸ್ಸುಗಳನ್ನು ನೀಡುವ ಉದ್ದೇಶವಿದೆಯೇ ತಿಳಿಸುವುದು;

ಋ) ಸರ್ಕಾರಿ ಬಸ್ಸುಗಳು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ಓಡಿಸುತ್ತಿರುವುದರಿಂದ ಸರ್ಕಾರಕ್ಕೆ ಬಂದ ಲಾಭವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಅಗತ್ಯವಾದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ.

ಇ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

ಈ) 130 ಬಸ್ ಸಂಚಾರವಿರುವ ಗ್ರಾಮ, 58 ಗ್ರಾಮಗಳಲ್ಲಿ ಬಸ್ ಸಂಚಾರಕ್ಕೆ ಯೋಗ್ಯವಾದ ರಸ್ತೆ ಇಲ್ಲದ ಹಾಗೂ ಜನಸಂದಣಿ ಕಡಿಮೆ ಇರುವ ಕಾರಣ, ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.

ಉ) ಹೌದು. ರಾಯಚೂರು ವಿಭಾಗವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆಡಳಿತ ವ್ಯಾಪ್ತಿಗೆ ಒಳಪಡುವುದಿಲ್ಲ.

ಊ) ಹೌದು. ಪ್ರಸ್ತುತ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಋ) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಏಪ್ರಿಲ್ 2004ರಿಂದ ನವೆಂಬರ್ 2004 ರವರೆಗೆ 546.50 ಲಕ್ಷ ಉಳಿತಾಯವಾಗಿರುತ್ತದೆ.